## ಪರಿಶೀಲನಾ ಪಟ್ಟಿ

1. ಗುರುತಿನ ಪುರಾವೆ : ಮತದಾರರ ಗುರುತಿನ ದಾಖಲೆಯ ಚೀಟಿ/ರಹದಾರಿ ಪರವಾನಗಿ/ಚಾಲನಾ ಪರವಾನಗಿ/ಖಾಯಂ ಖಾತಾ ಸಂಖ್ಯೆಯ ಚೀಟಿ/ ಪ್ರಸ್ತುತ ಬ್ಯಾಂಕರುಗಳಿಂದ ಮಾಲೀಕರ, ಪಾಲುದಾರರ ಹಸ್ತಾಕ್ಷರದ ಗುರುತಿಸುವಿಕೆ(ಕಂಪೆನಿ ಆಗಿದ್ದಲ್ಲಿ)
2. ನಿವಾಸದ ಪುರಾವೆ: ಇತ್ತೀಚಿನ ದೂರವಾಣಿ ರಸೀದಿಗಳು, ವಿದ್ಯುಚ್ಛಕ್ತಿ ರಸೀದಿ, ಆಸ್ತಿ ತೆರಿಗೆ ರಸೀದಿ / ರಹದಾರಿ ಪರವಾನಗಿ / ಮಾಲೀಕರ /ನಿರ್ದೇಶಕರ ಪಾಲುದಾರ (ಕಂಪೆನಿಯಾಗಿದ್ದಲ್ಲಿ) ಮತದಾರರ ಗುರುತಿನ ದಾಖಲೆಯ ಚೀಟಿ, ವ್ಯವಹಾರದ ವಿಳಾಸದ ಪುರಾವೆ.
3. ವ್ಯವಹಾರದ ವಿಳಾಸದ ಪುರಾವೆ.
4. ಅರ್ಜಿದಾರನು ಯಾವುದೇ ಬ್ಯಾಂಕ್ / ಹಣಕಾಸಿನ ಸಂಸ್ಥೆಯಲ್ಲಿ ಬಾಕಿದಾರನಾಗಿರಬಾರದು.
5. ಕಂಪೆನಿಯ ಮಂಡಳಿಯ ಜ್ಞಾಪನ ಮತ್ತು ಪರಿಚ್ಛೇದ/ ಪಾಲುದಾರರ ಪಾಲುದಾರಿಕೆಯ ಕರಾರು ಪತ್ರ ಇತ್ಯಾದಿ.
6. ಇತ್ತೀಚಿನ ಆದಾಯ ತೆರಿಗೆ ಸಲ್ಲಿಕೆಯ ಮಾಹಿತಿ ಜೊತೆಗೆ ಪ್ರವರ್ತಕರು ಮತ್ತು ಖಾತರಿದಾರರ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳ ತಖ್ತೆ.
7. ಬಾಡಿಗೆ ಒಪ್ಪಂದ (ವ್ಯವಹಾರದ ಕಟ್ಟಡವು ಬಾಡಿಗೆಯದ್ದಾಗಿದ್ದಲ್ಲಿ) ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸ್ಪಷ್ಟನಾ ಪತ್ರ, ಅನ್ವಯವಾಗಿದ್ದರೆ.
8. ಸಣ್ಣಮಟ್ಟದ ಕೈಗಾರಿಕೆ/ಎಮ್.ಎಸ್.ಎಮ್.ಇ. ನೋಂದಣಿ, ಅನ್ವಯವಾಗಿದ್ದರೆ.
9. ಕೆಲಸದ ಬಂಡವಾಳ ಮಿತಿಗಳ ಸಂದರ್ಭದಲ್ಲಿ ಮತ್ತು ಅವಧಿ ಸಾಲ ಆಗಿದ್ದಲ್ಲಿ ಸಾಲದ ಅವಧಿಯ ಸಂದರ್ಭದಲ್ಲಿ, ಮುಂದಿನ ಎರಡು ವರ್ಷಗಳ ಯೋಜಿತ ಸ್ಥಿತಿ ವಿವರಣ ಪಟ್ಟಿ.
10. ಪ್ರಾಥಮಿಕ ಮತ್ತು ಮೇಲಾಧಾರ ಭದ್ರತೆಗಳಾಗಿ ನೀಡಲಾಗುವ ಎಲ್ಲಾ ಸ್ವತ್ತುಗಳ ಗುತ್ತಿಗೆ ಕರಾರುಪತ್ರ / ಹಕ್ಕು ಕರಾರು ಪತ್ರಗಳ ಯಥಾಪ್ರತಿಗಳು.
11. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿದ್ದಾರೆ ಎಂದು ಪ್ರಮಾಣೀಕರಿಸುವ ಬಗ್ಗೆ ದಾಖಲೆಗಳು, ಅನ್ವಯವಾಗಿದ್ದರೆ.
12. ಕಂಪೆನಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ/ಮಹಿಳಾ ವರ್ಗದವರ ಕೈಯಲ್ಲಿ ಬಹುತೇಕ ಹಿಡುವಳಿ ಪಾಲು ಇರುವ ಬಗ್ಗೆ ಆರ್.ಓ.ಸಿ.ಯಿಂದ ಸಂಯೋಜನಾ ಪ್ರಮಾಣ ಪತ್ರ.

**ರೂ.25 ಲಕ್ಷಕ್ಕಿಂತಲೂ ಹೆಚ್ಚಿನ ಸಾಲ ಹೊಂದಿರುವ ಪ್ರಕರಣಗಳಿಗಾಗಿ.**

13. ಘಟಕದ ವಿವರ (ಪ್ರವರ್ತಕರ ಹೆಸರುಗಳು, ಕಂಪೆನಿಯಲ್ಲಿನ ಇತರ ನಿರ್ದೇಶಕರು, ಚಟುವಟಿಕೆಗಳನ್ನು ಕೈಗೊಳ್ಳುವ ಎಲ್ಲಾ ಕಚೇರಿಗಳ ಮತ್ತು ಉದ್ದಿಮೆ ಸ್ಥಳಗಳ ವಿಳಾಸ, ಶೇರು ಸಂಗ್ರಹ ಮಾದರಿ ಇತ್ಯಾದಿ).

14. ಸಹವರ್ತಿ/ಸಮೂಹ ಕಂಪೆನಿಗಳ ಇತ್ತೀಚಿನ ಮೂರು ವರ್ಷದ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿ.

15. ಸ್ವಾಧೀನ ಪಡಿಸಿಕೊಳ್ಳಲು ಹೊಂದಿರುವ ಯಂತ್ರಗಳ ವಿವರಗಳ ಯೋಜನಾ ವರದಿಯನ್ನು (ಉದ್ದೇಶಿತ ಯೋಜನೆಯಲ್ಲಿ, ಅವಧಿ ನಿಧೀಕರಣ ಅಗತ್ಯವಿದ್ದರೆ), ಯಾರಿಂದ ಸ್ವಾಧೀನ ಪಡಿಸಿಕೊಳ್ಳಬೇಕು, ಬೆಲೆ, ಪೂರೈಕೆದಾರರ ಹೆಸರುಗಳು, ಯಂತ್ರಗಳ ಸಾಮರ್ಥ್ಯ ಮುಂತಾದ ಹಣಕಾಸಿನ ವಿವರಗಳು, ಕಲ್ಪಿತ ಬಳಕೆಗೆ ಬರುವ ಸಾಮರ್ಥ್ಯ, ಉತ್ಪಾದನೆ, ಮಾರಾಟ, ಸಾಲದ ಆಶಯಕ್ಕಾಗಿ ಯೋಜಿತ ಆಯ ಮತ್ತು ವ್ಯಯ ಮತ್ತು ಆರ್ಥಿಕ ಸ್ಥಿತಿ ವಿವರಣಾ ಪಟ್ಟಿ, ಕಾರ್ಮಿಕರ ವಿವರ, ನೇಮಕ ಮಾಡುವ ಸಿಬ್ಬಂದಿ, ಅಂತಹ ಹಣಕಾಸಿನ ವಿವರಗಳ ಊಹೆಯ ಆಧಾರದ ಮೇಲೆ ಇತ್ಯಾದಿ.

16. ಉತ್ಪಾದನಾ ಪ್ರಕ್ರಿಯೆಯು ಅನ್ವಯವಾಗಿದ್ದರೆ, ಕಂಪೆನಿಯ ಕಾರ್ಯನಿರ್ವಾಹಕರ ಪ್ರಮುಖ ವಿವರ, ಯಾವುದೇ ಕಟ್ಟುಪಾಡುಗಳು, ಬಳಸಿದ ಕಚ್ಚಾ ಸಾಮಗ್ರಿಗಳು ಮತ್ತು ಅವುಗಳ ಪೂರೈಕೆದಾರರ ವಿವರಗಳು, ಖರೀದಿದಾರರ ವಿವರಗಳು, ಅವರ ಪ್ರತಿಸ್ಪರ್ಧಿಗಳಿಗೆ ಹೋಲಿಸಿದರೆ ಪ್ರಮುಖ ಪ್ರತಿಸ್ಪರ್ಧಿಗಳ ವಿವರಗಳು ಮತ್ತು ಕಂಪೆನಿಯ ಶಕ್ತಿ ಮತ್ತು ದೌರ್ಬಲ್ಯಗಳು, ಇತ್ಯಾದಿ.

(ಪರಿಶೀಲನಾ ಪಟ್ಟಿ ಕೇವಲ ಸೂಚಕ ಮತ್ತು ಸಮಗ್ರವಾಗಿಲ್ಲ. ವಿವಿಧ ಸ್ಥಳಗಳಲ್ಲಿ ಸ್ಥಳೀಯ ಅವಶ್ಯಕತೆಗಳನ್ನು ಅವಲಂಬಿಸಿ ಹೆಚ್ಚುವರಿಯಾಗಿ (ಅವಶ್ಯಕತೆಯಂತೆ) ಮಾಡಬಹುದಾಗಿದೆ.

*****